ಮಂಜೂರು ಮಾಡಿರುವುದಿಲ್ಲ

ಆ) ಹಾಗಿದ್ದಲ್ಲಿ, ಈ ಒಳಚರಂಡಿ ಕಾಮಗಾರಿಗಳಿಗೆ ಎಷ್ಟು ಹಣ ಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ,

ಹಣ ಬಿಡುಗಡೆಯಾಗಿಲ್ಲ

ಇ) ಹಣ ಮಂಜೂರಾಗಿದ್ದರೂ ಈ ಕಾಮಗಾರಿಯನ್ನು ಪ್ರಾರಂಭಿಸಲು ವಿಳಂಬ ಮಾಡುತ್ತಿರುವುದಕ್ಕೆ ಕಾರಣಗಳೇನು?

ಉದ್ಭವಿಸುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1188(1583)**
ಮಾನ್ಯ ಸದಸ್ಯರ ಹೆಸರು **ಶ್ರೀ ಕೃಷ್ಣಪ್ಪ ಎಂ ಟಿ (ತುರುವೇಕೆರೆ)**
ಉತ್ತರಿಸುವ ಸಚಿವರು **ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)**

ಅ) ಶಿಂಷಾ ನದಿಗೆ ಅಡ್ಡಲಾಗಿ ಮನೆ ಚೆಂಡೂರು ಹಾಗೂ ಮುತ್ತಂದ್ರಗಳ ಸಮೀಪ ಎರಡು ಪಿಕಪ್‌ಗಳನ್ನು ನಿರ್ಮಿಸುವ ಕೆಲಸ ಇನ್ನೂ ಪ್ರಾರಂಭವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಹೌದು

ಆ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೋಂಡಿರುವ ಕ್ರಮಗಳೇನು,

ಮಣಿಚೆಂಡೂರು ಹಾಗೂ ಮುತ್ತ್ಸಂದ್ರ ಗ್ರಾಮಗಳ ಸಮೀಪ ಪಿಕಪ್‌ಗಳನ್ನು ನಿರ್ಮಿಸಲು ಅಂದಾಜುಗಳನ್ನು ಕ್ರಮವಾಗಿ ರೂ 76 85 ಲಕ್ಷ ಹಾಗೂ ರೂ 99 10 ಲಕ್ಷಗಳಿಗೆ ತಯಾರಿಸಲಾಗಿದೆ

ಇ) ಯಾವಾಗ ಈ ಕೆಲಸವನ್ನು ಪ್ರಾರಂಭಿಸಲಾಗುವುದು?

ಈ ಕಾಮಗಾರಿಗಳನ್ನು ತೆಗೆದುಕೊಳ್ಳುವ ಬಗ್ಗೆ ಪರಿಶೀಲಿಸಲಾಗುತ್ತಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1189(1584)**
ಮಾನ್ಯ ಸದಸ್ಯರ ಹೆಸರು **ಶ್ರೀ ಕೃಷ್ಣಪ್ಪ ಎಂ ಟಿ (ತುರುವೇಕೆರೆ)**
ಉತ್ತರಿಸುವ ಸಚಿವರು **ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು)**

ಅ) ಗ್ರಾಮೀಣ ನೀರು ಸರಬರಾಜು ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಕಳೆದ 3 ವರ್ಷಗಳಿಂದ ನೀಡಿದ ಮತ್ತು ಖರ್ಚು ಮಾಡಿದ ಹಣವೆಷ್ಟು (ವೆಚ್ಚವಾರು ವಿವರ ನೀಡುವುದು),

ಕಳೆದ ಮೂರು ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಗ್ರಾಮೀಣ ಕುಡಿಯುವ ನೀರಿನ ಬಾಬ್ತಿಗಾಗಿ ಬಿಡುಗಡೆಯಾದ ಮತ್ತು ವೆಚ್ಚವಾದ ಅನುದಾನ ಕೆಳಕಂಡಂತಿದೆ (ರೂ ಕೋಟಿಗಳಲ್ಲಿ)

ವರ್ಷ	ಬಿಡುಗಡೆ	ವೆಚ್ಚ
2004—05	169 66	155 57
2005–06	271 79	251 75
2006–07 (ಮಾರ್ಚ್–07ರ ಅಂತ್ಯಕ್ಕೆ)	277 54	207 76
ಒಟ್ಟು	718 99	615 08

ಆ) ಇದರಲ್ಲಿ ತುಮಕೂರು ಜಿಲ್ಲೆಗೆ ಒದಗಿಸಿದ ಮತ್ತು ಖರ್ಚು ಮಾಡಿದ ಹಣವೆಷ್ಟು (ವಿವರ ನೀಡುವುದು)?

ಈ ಪೈಕಿ ಕೇಂದ್ರವಲಯದಡಿ ತುಮಕೂರು ಜಿಲ್ಲೆಗೆ ರೂ 34 98 ಕೋಟಿ ಬಿಡುಗಡೆಯಾಗಿದ್ದು, ರೂ 31 31 ಕೋಟಿ (ಫೆಬ್ರವರಿ 2007ರ ಅಂತ್ಯಕ್ಕೆ) ವೆಚ್ಚವಾಗಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1190(1578)**
ಮಾನ್ಯ ಸದಸ್ಯರ ಹೆಸರು **ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ(ಬೆಳ್ಳಾವಿ)**
ಉತ್ತರಿಸುವ ಸಚಿವರು **ಶ್ರೀ ಡಿ ಎಚ್ ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು)**

ಅ) ತುಮಕೂರು ಜಿಲ್ಲೆಯಲ್ಲಿ ಇವರು ಪದವಿ ಕಾಲೇಜುಗಳು ಎಷ್ಟು ಹಾಗೂ ಅವುಗಳಲ್ಲಿ ಯಾವ ಯಾವ ಪದವಿ ವಿಭಾಗಗಳ ವ್ಯಾಸಂಗಕ್ಕೆ ಅನುಕೂಲ ಮಾಡಿಕೊಡಲಾಗಿದೆ,

ತುಮಕೂರು ಜಿಲ್ಲೆಯಲ್ಲಿ 12 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿದ್ದು 08 ಖಾಸಗಿ ಅನುದಾನಿತ ಕಾಲೇಜುಗಳಿವೆ ಇವುಗಳಲ್ಲಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳಿವೆ

ಆ) ಈ ಕಾಲೇಜುಗಳಿಗೆ ಸ್ವಂತ ಕಟ್ಟಡ ಮತ್ತಿತರ ಸೌಲಭ್ಯಗಳನ್ನು ಒದಗಿಸಿಕೊಡಲಾಗಿದೆಯೆ,

ತುಮಕೂರು ಜಿಲ್ಲೆಯ ಹೆಬ್ಬೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ಕಟ್ಟಡ ಇರುವುದಿಲ್ಲ ಈ ಕಾಲೇಜಿಗೆ ನಿವೇಶನವನ್ನು ಪಡೆಯಲು ಪ್ರಯತ್ನಿಸಲಾಗುತ್ತಿದೆ ಖಾಸಗಿ ಅನುದಾನಿತ ಕಾಲೇಜುಗಳಿಗೆ ಸ್ವಂತ ಕಟ್ಟಡ ಮತ್ತಿತರ ಸೌಲಭ್ಯ ಒದಗಿಸುವುದನ್ನು ಸಂಬಂಧಪಟ್ಟ ಕಾಲೇಜುಗಳ ಆಡಳಿತ ಮಂಡಳಿಗಳು ನೋಡಿಕೊಳ್ಳುತ್ತವೆ